ಆದೇಶಕ್ಕಾಗಿ ಎಲ್ಲಿ ಆ ಕಡತಗಳು ಇವೆ, ಅದನ್ನು ಏಕೆ ಇಟ್ಟಕೊಂಡಿದ್ದಾರೆ ಮತ್ತು ಇದನ್ನು ಇಟ್ಟುಕೊಂಡಿರತಕ್ಕಂಥ ಉದಾಸೀನ ಮಾಡಿರತಕ್ಕಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತೆ ಪುನರ್‌ವಸತಿ-ಪರಿಹಾರವನ್ನು ಕೊಡುವುದಕ್ಕಾಗಿ ಸರ್ಕಾರದ ಆದೇಶವನ್ನು ಹೊರಡಿಸಬೇಕೆಂದು ಹೇಳಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಮಾಹಿತಿ ಪಡೆದು ನಂತರ ಹೇಳಿಕೆ ಕೊಡುತ್ತೇನೆ. ಇವರು ಏನು ಹೇಳಿದ್ದಾರೆ ಎಂದರೆ, ನಾಲ್ಕು ವರ್ಷಗಳಿಂದ, ಪುನರ್‌ವಸತಿ ಆಗಿಲ್ಲ, ಸರ್ಕಾರಿ ಆಜ್ಞೆ ಆಗಿತ್ತು, ಒಂದು ಹೈಪವರ್ ಕಮಿಟಿ ಇದೆ ಎಂದು ಹೇಳಿದ್ದಾರೆ. ನಾನು ಅದರ ಬಗ್ಗೆ ವಿಚಾರಣೆ ಮಾಡಿ ಇವತ್ತು ಅಥವಾ ನಾಳೆ ಒಳಗಡೆ ಸಮರ್ಪಕವಾದಂಥ ಉತ್ತರವನ್ನು ಕೊಡುತ್ತೇನೆ.

(ಒ) ಹೊನ್ನಾವರ ತಾಲ್ಲೂಕಿನ ಆರಾಧನಾ ಸಮಿತಿಯ ಪಟ್ಟಿಯನ್ನು ತಿರಸ್ಕರಿಸುವುದು.

ಶ್ರೀ ಶಿವಾನಂದ ನಾಯಕ್ (ಭಟ್ಕಳ್): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಜರಾಯಿ ಸಚಿವರು ಇಲ್ಲ. ಆದರೂ ಸಹ ಸರ್ಕಾರದ ಪರವಾಗಿ ಯಾರಾದರೂ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಸರ್ಕಾರದ ಆದೇಶದಂತೆ ಶಾಸಕರನ್ನು ಆರಾಧನಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಆ ಉದ್ದೇಶ ಇಟ್ಟುಕೊಂಡು ನಮ್ಮ ಹೊನ್ನಾವರ ತಾಲ್ಲೂಕಿನ ಆಶ್ರಯ ಸಮಿತಿಯ ಸಭೆಯನ್ನು 12.5.97ಕ್ಕೆ ಕರೆದು ಸಾರ್ವಜನಿಕರಿಂದ ಬಂದಿರತಕ್ಕಂಥ ಅರ್ಜಿಗಳನ್ನು ಪರಿಶೀಲನೆ ಮಾಡಿ ಆಯ್ಕೆ ಮಾಡಿ ಒಂದು ಯಾದಿಯನ್ನು ಕಳುಹಿಸಿಕೊಟ್ಟಾಯಿತು. ನಾವು ಕಳುಹಿಸಿದ ಯಾದಿಯನ್ನು ತಿರಸ್ಕಾರ ಮಾಡಿ 24.5.97ಕ್ಕೆ ಬೇರೆ ಯಾದಿಯನ್ನು ರಚನೆಮಾಡಿ ಅದಕ್ಕೆ ಹಣವನ್ನು ಮಂಜೂರು ಮಾಡಿಕೊಟ್ಟಿದ್ದಾರೆ. ನನಗೆ ಈ ರೀತಿಯ ಅನ್ಯಾಯವಾಗಿದೆ ಎಂದು ತಮಗೂ ಸಹ ಪತ್ರಬರೆದಿದ್ದೇನೆ ಮತ್ತು ಮಾನ್ಯ ಮುಜರಾಯಿ ಸಚಿವರಿಗೂ ಸಹ ಪತ್ರ ಬರೆದಿದ್ದೇನೆ. ತಮ್ಮಿಂದ ನನಗೆ ಉತ್ತರ ಬಂದಿದೆ. ಆದರೆ ಮುಜರಾಯಿ ಮಂತ್ರಿಗಳು ಉತ್ತರ ಕೊಡುವಂಥ ಸೌಜನ್ಯವನ್ನೂ ಮಾಡಲಿಲ್ಲ. ಈ ರೀತಿ ಶಾಸಕರಿಗೆ ಒಂದು ಅಧಿಕಾರವನ್ನು ಕೊಟ್ಟು ನಂತರ ಅಗೌರವ ಮಾಡುವುದು ಯಾಕೆ? ಏಕೆ ಇದನ್ನು ಮಾಡುತ್ತಿದ್ದಾರೆ? ನಾನು ಒಂದು ಪತ್ರ ಕೊಟ್ಟರೂ ಸಹಿತ ನಮಗೆ ಸರಿಯಾಗಿ ಉತ್ತರ ಕೊಡುವುದಿಲ್ಲ. ಈ ರೀತಿ ಆಗಬಾರದು ಮತ್ತು ಇದಕ್ಕೆ ಸರಿಯಾದ ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ತಾವೇಹೇಳಿ, ಸರ್ಕಾರದ ಪರವಾಗಿ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಅದರ ಬಗ್ಗೆ ಮಾಹಿತಿ ಪಡೆದು ಉತ್ತರ ಒದಗಿಸಿಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅದು ಅವರು ಏನು ಹೇಳುತ್ತಿದ್ದಾರೆ, ಇದು ಕೇವಲ ಅಲ್ಲಿ ಅಲ್ಲ. ನನ್ನ ಕ್ಷೇತ್ರದಲ್ಲಿ ಮೂರು-ನಾಲ್ಕು ಕಡೆ, ಕೆಲವು ಶಾಸಕರು ಬಂದು ನನ್ನನ್ನು ಕಂಡಿದ್ದಾರೆ. ಒಂದು ಗೌರವಾನ್ವಿತ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದ್ದಾರೆ, ಅಲ್ಲಿ ಬೇರೆ ಪ್ರತಿನಿಧಿಗಳೂ ಇದ್ದಾರೆ. ಆದರೆ ಒಂದು ಸಲ ತೀರ್ಮಾನವನ್ನು ಮಾಡಿ ಜಿಲ್ಲಾಧಿಕಾರಿಗಳಿಗೆ ಕಳಿಸಿದಮೇಲೆ ಅವರು ಯಾವುದೋ ಪಟ್ಟಿಮಾಡಿ ಕಳುಹಿಸುವುದು ಅದು ಶಾಸಕರಿಗೆ ಮಾಡಿದಂಥ ಅಪಮಾನ. ಇಲ್ಲದಿದ್ದರೆ ಸಮಿತಿ ಬೇಕಾದರೆ ರದ್ದು ಮಾಡಿಬಿಡಿ. ಇಲ್ಲವಾದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಿತಿ ಕೊಟ್ಟಂಥ ಶಿಫಾರಸ್ಸು ಪ್ರಕಾರವೇ ತೆಗೆದುಕೊಳ್ಳುವುದಕ್ಕೆ ಇವತ್ತೇ ತಾವು ಡೈರೆಕ್ಷನ್ ಕೊಡಿ.

ಶ್ರೀ ಸಿದ್ಧರಾಮಯ್ಯ: ಶಾಸಕರು ಅಧ್ಯಕ್ಷರಾಗಿ ಅಲ್ಲಿ ಸಭೆ ಸೇರುತ್ತದೆ. ಆರಾಧನಾ ಸಮಿತಿ ಶಿಫಾರಸ್ಸು ಮಾಡಿ ಕಳುಹಿಸದಮೇಲೆ ಅದು ಕಾನೂನಿನ ಚೌಕಟ್ಟಿನೊಳಗಡೆ ಅಲ್ಲಿರತಕ್ಕಂಥ ಅಧಿಕಾರದ ಇತಿಮಿತಿಯೊಳಗೆ ಇದ್ದರೆ ಯಾವುದೇ ಜಿಲ್ಲಾಧಿಕಾರಿಗಳು ಅದನ್ನು ಬದಲಾಯಿಸಕೂಡದು. ಆ ತರಹ ಇದ್ದರೆ ನಾನು ಆ ಜಿಲ್ಲಾಧಿಕಾರಿಗಳಿಗೆ, ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಸೂಚನೆಯನ್ನು ಕೊಡಿಸಲಿಕ್ಕೆ ಹೇಳುತ್ತೇನೆ.

ಶ್ರೀ ಯು.ಆರ್.ಸಭಾಪತಿ: ಅಧ್ಯಕ್ಷರೇ....

ಅಧ್ಯಕ್ಷರು: ಇದರ ಬಗ್ಗೆ ಚರ್ಚೆ ಆಗತ್ಯ ಇಲ್ಲ. ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಅವರು ಹೇಳಿದ್ದಾರೆ.

ಶ್ರೀ ಯು.ಆರ್.ಸಭಾಪತಿ: ಅವರದ್ದು ಒಂದು ಪರಿಸ್ಥಿತಿ ಇದ್ದರೆ, ನಮ್ಮದು ಇನ್ನೊಂದು ಪರಿಸ್ಥಿತಿ. ನಮ್ಮಲ್ಲಿ ಒಂದು ವರ್ಷದಿಂದ ಆರಾಧನಾ ಸಮಿತಿಯನ್ನು ಮಾಡದೆ ಬಿಡುಗಡೆಯಾದ ಹಣ ಕೂಡ ಲ್ಯಾಪ್ಸ್ ಆಗಿದೆ. ಪದೆಪದೇ ನಾನು ಸದನದಲ್ಲಿ ಇದರ ಬಗ್ಗೆ ಹೇಳಿದ್ದೆ....

ಅಧ್ಯಕ್ಷರು: ಈ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ತಕ್ಷಣವೇ ಗಮನಹರಿಸುತ್ತೇನೆ ಎಂದ ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ: ಅದು ಡಿ.ಸಿ. ಹತ್ತಿರ ಇರುತ್ತದೆ. ನಿಮ್ಮಲ್ಲಿ ಸಮಿತಿ ರಚನೆ ಮಾಡಿಲ್ಲವೆ? ರಚನೆ ಮಾಡಿಸಲಿಕ್ಕೆ ಹೇಳುತ್ತೇನೆ.

ಶ್ರೀ ಯು.ಆರ್.ಸಭಾಪತಿ: ಅರ್ಜಿಗಳು ಬಂದಿವೆ. ಆದರೆ ಇತ್ಯರ್ಥ ಮಾಡುವುದಕ್ಕೆ ಆಗಿಲ್ಲ.

ಅಧ್ಯಕ್ಷರು: ಬೇಗ ಮಾಡಿಸಿ ಸ್ವಾಮಿ.

ಶ್ರೀ ಸಿದ್ದರಾಮಯ್ಯ: ಮಾಡಿಸೋಣ ಬಿಡಿ.

3. ಪ್ರಕಟಣೆ

ಆಂಧ್ರ ಪ್ರದೇಶ ವಿಧಾನ ಸಭೆಯ ಉಪಾಧ್ಯಕ್ಷರಿಂದ ಸದನದ ಕಾರ್ಯಕಲಾಪ ವೀಕ್ಷಣೆ.

ಅಧ್ಯಕ್ಷರು: ಸದನದ ಕಲಾಪಗಳನ್ನು ವೀಕ್ಷಿಸಲು ಆಂಧ್ರ ವಿಧಾನಸಭೆಯ ಸನ್ಮಾನ್ಯ ಗೌರವಾನ್ವಿತ ಉಪಾಧ್ಯಕ್ಷರಾದ ಶ್ರೀ ಮಹಮ್ಮದ್ ಫಾರೂಕ್ ಅವರು, ಸರ್ಕಾರಿ ಮುಖ್ಯ ಸಚೇತಕರಾದ ಶ್ರೀ ಆರ್.ಚಂದ್ರಶೇಖರ ರೆಡ್ಡಿಯವರು ಮತ್ತು ಗೌರವಾನ್ವಿತ ಸದಸ್ಯರುಗಳಾದ ಶ್ರೀ ಕೋದಂಡರೆಡ್ಡಿಯವರು, ಪುರುಷೋತ್ತಮರಾವ್ ಅವರು ಮತ್ತು ಅಲ್ಲಿನ ವಿಧಾನಸಭೆಯ ವಿಶೇಷ ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶನ್ ಅವರು ನಮ್ಮ ಗ್ಯಾಲರಿಯಲ್ಲಿ ಉಪಸ್ಥಿತರಿದ್ದಾರೆ. ಅವರನ್ನು ನಾನು ಸ್ವಾಗತ ಮಾಡುತ್ತೇನೆ. ಈಗ ಗಮನ ಸೆಳೆಯುವ ಸೂಚನೆಗಳು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ಹೇಗೆ ಮಾಡುತ್ತೀರಿ? ಚರ್ಚೆ ನಂತರ ತೆಗೆದುಕೊಳ್ಳುತ್ತೀರೋ?

ಅಧ್ಯಕ್ಷರು: ನಾಣಯ್ಯನವರು ಇಲ್ಲ. I will find some time. I will take it up.. ನಾಣಯ್ಯನವರು ಬರಲಿ, ನಾನು ಅವರಿಗೆ ಹೇಳಿ ಕಳಿಸಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಏಕೆಂದರೆ ನಾನು ಮೂರು ಸಲ ಈ ಸದನದಲ್ಲಿ ಕಂಟಿನ್ಯೂಸ್ ಆಗಿ ಮುಖ್ಯಮಂತ್ರಿಗಳ...

MR. SPEAKER: I realise the importance of the issue. Hon'ble Parliamentary affairs Minister is not there,

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸಿಂಗಲ್ ಪೋಸ್ಟ್ ರಿಸರ್ವೇಷನ್ ಬಗ್ಗೆ... ಬ್ಯಾಕ್‌ವರ್ಡ್ ಕ್ಲಾಸಸ್....ರಿವೈಸ್ ಮಾಡತಕ್ಕಂಥದ್ದು...

MR. SPEAKER: I will accommodate. We will take up that issue. ಏನು ರಾಮ ಸ್ವಾಮಿಯವರೇ ಎಲ್ಲಾ ಮುಗಿಯಿತು ಅಲ್ವೆ?.. ಇಲ್ಲ ನಿನ್ನೆ ಎಲ್ಲಾ ಹೇಳಿದ್ದಾರೆ, let us not raise that issue again. ಕೊಡುತ್ತಾರೆ, ಆಮೇಲೆ ತರಿಸೋಣ. ಸನ್ಮಾನ್ಯ ಶ್ರೀ ಯಡಿಯೂರಪ್ಪನವರು, ಎಸ್.ವಿ.ರವೀಂದ್ರ ನಾಥ್, ಆಯನೂರು ಮಂಜುನಾಥ್‌ರವರು ಗಮನ ಸೆಳೆಯುವುದು.